**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1469/2017**

| | | |
|---|---|---|
| ಸಾಕ್ಷಿದಾರರ ಹೆಸರು | **ಮಹದೇವಸ್ವಾಮಿ** | ಪ್ರಾಸಾಃ 02 |
| ತಂದೆಯ/ಗಂಡನ ಹೆಸರು | ಸಿದ್ದಪ್ಪ | ಚಾಸಾಃ 03 |
| ವಯಸ್ಸು | 43 ವರ್ಷ | |
| ಕೆಲಸ | ಕೂಲಿ | ಸಾ ಪ್ರ ಬೋ |
| ವಾಸ | ಹೊಸಕೋಟೆ, ನಂಜನಗೂಡು | ದಿಃ 30.07.2025 |

**ಮುಖ್ಯ ವಿಚಾರಣೆ ಪ್ರಾಜ್ಞ ಸ.ಸ.ಅ ರವರಿಂದಃ**

ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ. ಪೊಲೀಸರಿಗೆ ನಾನು ಯಾವುದೇ ಯಾವುದೇ ಹೇಳಿಕೆ ನೀಡಿರುವುದಿಲ್ಲ.

ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ.ಪಿ. 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಪ್ರಾಜ್ಞ ಸ.ಸ.ಅ ರವರಿಂದಃ**

ದಿಃ 04.08.2017 ರಂದು ಬೆಳಿಗ್ಗೆ 8.05 ಗಂಟೆ ಸಮಯದಲ್ಲಿ ನಾನು ಹಾಗೂ ಚಾಸಾ 2 ರವರು ಕೂಲಿ ಕೆಲಸಕ್ಕೆ ಹೋಗಲು ವೀರಭದ್ರೇಶ್ವರ ಖಾಸಗಿ ಬಸ್ ಹತ್ತಿದ್ದು, ಅದೇ ಸಮಯದಲ್ಲಿ ನಮ್ಮೊಂದಿಗೆ ನಮ್ಮ ಊರಿನ ಚಿಕ್ಕತಾಯಮ್ಮರವರು ಬಸ್ಸನ್ನು ಹತ್ತಿದ್ದು ಬೆಳಿಗ್ಗೆ 8.15 ಗಂಟೆ ಸಮಯದಲ್ಲಿ ನಮ್ಮ ಊರಿನಿಂದ ಸುಮಾರು 1 ½ ಕಿ.ಮೀ ದೂರದಲ್ಲಿರುವ ಸುತ್ತೂರು ಮೈಸೂರು ಮುಖ್ಯ ರಸ್ತೆಯಲ್ಲಿ ಶ್ರೀ ಮುಂಡಾ ಬಸಪ್ಪಸ್ವಾಮಿ ದೇವಸ್ಥಾನದ ಮುಂಭಾಗ ಚಾಲಕ ಬಸ್ಸನ್ನು ನಿಲ್ಲಿಸಿದ್ದು ಚಿಕ್ಕತಾಯಮ್ಮ ಬಸ್ಸಿನ ಮುಂಭಾಗದ ಎಡ ಭಾಗದ ಡೋರಿನಲ್ಲಿ ಇಳಿಯುವಷ್ಟರಲ್ಲಿ ಅದರ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಓಡಿಸಿಕೊಂಡು ಮುಂದೆ ಹೋದಾಗ ಚಿಕ್ಕತಾಯಮ್ಮರವರು ಬಸ್ಸಿನಿಂದ ಕೆಳಗೆ ರಸ್ತೆಯ ಮೇಲೆ ಬಿದ್ದಿದ್ದು ತಕ್ಷಣ ನಾವು ಬಸ್ಸನ್ನು

ನಿಲ್ಲಿಸುವಂತೆ ಚಾಲಕನಿಗೆ ತಿಳಿಸಿ ಬಸ್ಸಿನಿಂದ ಇಳಿದು ನೋಡಲಾಗಿ ಚಿಕ್ಕತಾಯಮ್ಮನವರಿಗೆ ತಲೆ ಹಾಗೂ ಇತರೇ ಕಡೆ ತೀವ್ರ ಸ್ವರೂಪದ ಗಾಯಗಳು ಆಗಿದ್ದು ಈ ವಿಚಾರವನ್ನು ಚಿಕ್ಕತಾಯಮ್ಮನವರ ಗಂಡ ಚಾಸಾ 4 ರವರಿಗೆ ಹಾಗೂ ಗ್ರಾಮಸ್ಥರಿಗೆ ತಿಳಿಸಿ ನಂತರ ಚಿಕ್ಕತಾಯಮ್ಮ ರವರನ್ನು ಖಾಸಗಿ ವಾಹನದಲ್ಲಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದಾಗ ವೈದ್ಯಾಧಿಕಾರಿಗಳು ಪರೀಕ್ಷಿಸಿ ಚಿಕ್ಕತಾಯಮ್ಮ ಮೃತಪಟ್ಟಿರುತ್ತಾರೆ ಎಂದು ತಿಳಿಸಿದರು ಎಂದರೆ ಸರಿಯಲ್ಲ. ಸದರಿ ವೀರಭದ್ರೇಶ್ವರ ಬಸ್ ಸಂಖ್ಯೆ ಕೆ ಎ 09 5353 ಎಂದರೆ ನನಗೆ ಗೊತ್ತಿಲ್ಲ. ನಂತರ ಚಾಸಾ 1 ರವರು ಈ ಬಗ್ಗೆ ದೂರು ದಾಖಲಿಸಿರುವ ವಿಚಾರ ತಿಳಿಯಿತು ಎಂದರೆ ನನಗೆ ಗೊತ್ತಿಲ್ಲ.

ಈಗ ಓದಿ ಕೇಳಿಸಿಕೊಂಡ ನಿ.ಪಿ. 3 ರಂತೆ ಪೊಲೀಸರಿಗೆಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

**1ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**